ದಬ್ಬಾಳಿಕೆಯನ್ನು ತಡೆಯಲು ಸಮತೋಲನದ ಪ್ರಾತಿನಿಧ್ಯ ಕೊಡುವ ಸಾಧ್ಯತೆಯನ್ನು ಪ್ರಸ್ತಾಪಿಸಿದ್ದರು. ಅಲ್ಪಸಂಖ್ಯಾತರಿಗೆ ಖಚಿತ ಪ್ರಾತಿನಿಧ್ಯವನ್ನು ಸಂಸತ್ತಿನಲ್ಲೂ ಸರ್ಕಾರದಲ್ಲೂ ಕೊಡಬಹುದಾದ ರೀತಿಯನ್ನು ಬಾಬಾಸಾಹೇಬ್ ಪ್ರಸ್ತಾಪಿಸಿದ್ದರು. ಇದೇ ಯೋಜನೆಯನ್ನು 1946ರ ಕ್ಯಾಬಿನೆಟ್ ಮಿಷನ್ನಿನಲ್ಲಿ ಅವರು ಪ್ರಸ್ತುತ ಪಡಿಸಿದರಾದರೂ, ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ – ಉಭಯ ಪಕ್ಷಗಳ ವಿರೋಧದಿಂದಾಗಿ ಅದನ್ನು ಪರಿಗಣಿಸಲಿಲ್ಲ.

ಒಂದೆಡೆ ಬೌದ್ಧಿಕವಾಗಿ ಕಾನೂನು ರೂಪಿಸುವಲ್ಲಿ ತಮ್ಮ ಮೇಧಾಶಕ್ತಿಯಿಂದ ದಲಿತಪರ ಮತ್ತು ಸಮಾನತೆಯ ಪರವಾದ ವಾದಗಳನ್ನು ಮಂಡಿಸಿದರೆ, ಮತ್ತೊಂದೆಡೆ ದಲಿತ ಸಮುದಾಯಗಳಲ್ಲಿ ಸ್ವಾತಂತ್ರ್ಯದ ಮಹಾನ್ ಉದ್ದೇಶದ ಬಗ್ಗೆ ಹುಮ್ಮಸ್ಸು ಮತ್ತು ಹೆಚ್ಚಿನ ಸ್ಥೈರ್ಯ ತುಂಬುವ ಕೆಲಸವನ್ನೂ ಬಾಬಾಸಾಹೇಬ್ ಮಾಡಿದರು. ಸ್ವಾತಂತ್ರ್ಯ ಬಂದರೆ ಪೇಶ್ವೆಗಳ ಆಳ್ವಿಕೆಗೆ ಮತ್ತೆ ಇಳಿಯುತ್ತೇವೆನ್ನುವ ಆತಂಕವಿದ್ದ ಜನರಿಗೆ ಬಾಬಾಸಾಹೇಬ್ ಹುಮ್ಮಸ್ಸು ತುಂಬಿದ್ದು ಈ ರೀತಿಯಾದ ವಾದ ಮಂಡನೆಯಿಂದ:

"ಸ್ವಾತಂತ್ರ್ಯ ಬಂದರೆ ಎಲ್ಲರಿಗೂ ಸಮಾನ ಹಕ್ಕು ಬರುತ್ತದೆ, ಅದರಿಂದ ಮತ ಚಲಾಯಿಸುವ ಹಕ್ಕೂ ಬರುತ್ತದೆ. ಈ ದಿನ ಮತ ಚಲಾಯಿಸುವ ಹಕ್ಕು ಶೇಕಡಾ ಎರಡರಷ್ಟು ಜನರಿಗೆ ಮಾತ್ರ ಲಭ್ಯವಿದೆ. ಮತದಾನದ ಸಾರ್ವತ್ರಿಕ ಹಕ್ಕು ಬಂದ ಕೂಡಲೇ ನಮ್ಮ ಪರಿಸ್ಥಿತಿಯನ್ನು ನಮ್ಮ ಪ್ರತಿನಿಧಿಗಳು ನಜರಂದಾಜು ಮಾಡುವುದು ಸಾಧ್ಯವಿಲ್ಲ. ಮೇಲಾಗಿ ಇನ್ನೇನೂ ಇಲ್ಲವಾದರೂ, ಮತವನ್ನು ಬೇಡಲು ಒಬ್ಬ ಸವರ್ಣ ಬ್ರಾಹ್ಮಣ – ಅಸ್ಪೃಶ್ಯರ ಬಳಿಗೆ ಬಂದ ಕೂಡಲೇ ವರ್ಣಾಶ್ರಮ ಧರ್ಮಕ್ಕೇನಾಗುತ್ತದೋ ಊಹಿಸಿ" ಎಂದು, ಪ್ರಜಾತಂತ್ರ-ಸೌಂದರ್ಯದ ಪ್ರಾರಂಭಿಕ ಮಾತುಗಳನ್ನಾಡಿದ್ದರು.

ಎಲ್ಲರನ್ನೂ ಒಳಗೊಳ್ಳುವ ಪ್ರಶ್ನೆಯನ್ನು ಕೈಗೆತ್ತಿಕೊಂಡಾಗ ಸಾಮಾನ್ಯವಾಗಿ ಉದ್ಭವವಾಗುವ ಪ್ರಶ್ನೆ – ಮೆರಿಟ್ಟು – ಕ್ಷಮತೆ – ಕಾರ್ಯದಕ್ಷತೆಯದ್ದು. ಬಾಬಾಸಾಹೇಬ್ ಈ ಬಗ್ಗೆಯೂ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದರು. ಇಲ್ಲಿ ಅವರು ಉತ್ತಮ ಮತ್ತು ದಕ್ಷ ಆಡಳಿತದ ನಡುವಿನ ವ್ಯತ್ಯಾಸವನ್ನು ಬಿಡಿಸಿ ಹೇಳಿದ್ದರು. ದಕ್ಷತೆ ಅಥವಾ ಎಫಿಷಿಯೆನ್ಸಿ ಎನ್ನುವುದು ಕಡಿಮೆ ಸಮಯದಲ್ಲಿ ಕೆಲಸವನ್ನು ನಿಭಾಯಿಸುವುದು. ವ್ಯಾಪಾರದಲ್ಲಿ ಇದು ಉಪಯೋಗಕಾರಿಯಾಗಿರಬಹುದು. ಆದರೆ ಸರ್ಕಾರದಲ್ಲಿ? ಬಾಬಾಸಾಹೇಬ್ ಅದನ್ನು ಬಿಡಿಸಿ ಹೇಳುತ್ತಾರೆ. ಉತ್ತಮ ಸರ್ಕಾರ ಎಲ್ಲರ ಹಿತಾಸಕ್ತಿಗಳನ್ನು ಪರಿಗಣಿಸುತ್ತಾ, ವ್ಯಾಪಕ ಚರ್ಚೆಯಿಂದ, ಜನರನ್ನು ಒಳಗೊಂಡು ನೀತಿಗಳನ್ನು ರೂಪಿಸುತ್ತದೆ. ದಕ್ಷ ಸರ್ಕಾರ ವಿದ್ಯಾರ್ಹತೆ ಮತ್ತು ಜ್ಞಾನದಿಂದ ಮುಂದುವರೆಯುತ್ತದೆ. ದಕ್ಷತೆಯೇ ಬೇಕಿದ್ದರೆ ಚುನಾವಣೆಯೇಕೆ? ಆಂಗ್ಲರು, ಜರ್ಮನ್ನರು, ಫ್ರೆಂಚ್ ಸಂಜಾತರಲ್ಲಿರುವ ದಕ್ಷರನ್ನು ಕರೆತಂದು ಆಡಳಿತ ನಡೆಸಬಹುದಲ್ಲವೇ? ದಕ್ಷತೆಯನ್ನು ಅಟ್ಟಿ ಹೋಗುವಾಗ ನಾವು ಉತ್ತಮ ಸರ್ಕಾರ ನಡೆಸುವ ಅವಕಾಶವನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ. ಆಗ ಅವರು ಹೇಳಿದ ಮಾತು ಇಂದಿಗೂ ಸರಿ ಅನ್ನಿಸುತ್ತದೆ. ಪ್ರಸ್ತುತ ನಮ್ಮನ್ನು ಆಳುತ್ತಿರುವ ಕೇಂದ್ರ ಸರ್ಕಾರ 'ದಕ್ಷ ಸರ್ಕಾರ' ಎಂದು ಹೇಳಿಕೊಂಡು ತಿರುಗುತ್ತಿದೆ. ಆದರೆ ಅದು ಉತ್ತಮ ಸರ್ಕಾರವೇ ಎನ್ನುವ ಪ್ರಶ್ನೆಯನ್ನು ನಾವು ಕೇಳಬೇಕು.

ಬಾಬಾಸಾಹೇಬ್ ಅರ್ಥಶಾಸ್ತ್ರಜ್ಞರೂ ಆಗಿದ್ದರಿಂದ ಸರ್ಕಾರಕ್ಕೂ ಮಾರುಕಟ್ಟೆಗಳಿಗೂ ಇರುವ ಕಷ್ಟದ ಸಂಬಂಧವನ್ನು ಅರಿತಿದ್ದರು. ರಾಜಕೀಯವಾಗಿ ಪ್ರಜಾತಾಂತ್ರಿಕತೆಯನ್ನು ಅಪ್ಪುತ್ತಲೇ ಮಾರುಕಟ್ಟೆಗಳು ಹೇಗೆ ವರ್ತಿಸುತ್ತವೆ ಎನ್ನುವುದನ್ನು ಪರಿಗಣಿಸಬೇಕು. ಅದನ್ನು ಪರಿಗಣಿಸಿದಾಗ ಸಂವಿಧಾನದ ಮೂಲಭೂತ ಹಕ್ಕುಗಳನ್ನು ರೂಪಿಸಲು ಸಾಧ್ಯವಾಗುತ್ತದೆ ಎಂದು ವಾದಿಸಿದ್ದರು. ಮೂಲಭೂತ ಹಕ್ಕುಗಳನ್ನು ವ್ಯಾಖ್ಯೆ ಮಾಡುತ್ತ ನಾಲ್ಕು ಆಯಾಮಗಳನ್ನು ಬಾಬಾಸಾಹೇಬ್ ಉಲ್ಲೇಖಿಸಿದ್ದರು – ಒಂದು: ವ್ಯಕ್ತಿಯ ಅಸ್ತಿತ್ವವನ್ನು ಗುರುತಿಸುವುದೇ ಒಂದು ಮುಖ್ಯ ಸೂತ್ರ. ಇರುವಿಕೆಯೇ ಮೂಲಭೂತ ಹಕ್ಕು. ಎರಡು: ವ್ಯಕ್ತಿಯಲ್ಲೇ ವಿಲೀನಗೊಂಡ ಕೆಲವು ಮೂಲಭೂತ ಹಕ್ಕುಗಳನ್ನು ಸಂವಿಧಾನ ನೀಡಬೇಕು. ಮೂರು: ಯಾವುದೋ ಪುಟ್ಟ ಸವಲತ್ತು ಸಿಗುವುದರಿಂದ ಹಕ್ಕುಗಳನ್ನು ಬಿಟ್ಟುಕೊಡುವ ಪರಿಸ್ಥಿತಿ ಉಂಟಾಗಬಾರದು. ನಾಲ್ಕು: ಕಾನೂನು-ಕಾಯಿದೆಗಳ ಪ್ರಕಾರ ಸರ್ಕಾರದ ಆಡಳಿತದ ಕೆಲಸವನ್ನು ಯಾವುದೇ ಖಾಸಗಿ ಸಂಸ್ಥೆ ಅಥವಾ